Rega No BG 155

Sri "SATYAVADI"
— DAILY —
MYSORE 4
46 th Year

Protect the cow

— ೬೧ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

3—5—1962

ಸಮಸ್ತ ಸದ್ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ- ಮಾಡಿ

ಭಾರತದ ಉತ್ತರದ ಗಡಿಯಲ್ಲಿ ಬಲವಾದ ರಕ್ಷಣೆ

ಚೀನಾದ ಪ್ರತಿಭಟನೆ

ಸಿಕಿಯಾಂಗು ಪ್ರದೇಶದೊಳಗೆ ಭಾರತದ ಸೇನೆಗಳು ನುಗ್ಗಿವೆ ಎಂದು, ಭಾರತ ಹೊಸದಾಗಿ ಸೇನೆ ಠಾಣ್ಯಗಳನ್ನು ನಿರ್ಮಾಣ ಮಾಡಿದೆ ಎಂದು ಆರೋಪಿಸಿ ಬಲವಾದ ಪ್ರತಿಭಟನೆಯನ್ನು ಭಾರತಕ್ಕೆ ಚೀನಾ ಕಳಿಸಿದೆ ಎಂದು ಹಾಂಗಕಾಂಗ ವಾರ್ತೆ

೦೦೦

ನವದೆಹಲಿಯಿಂದ ಶ್ವೇತಪತ್ರದಿಂದ ಹುಟ್ಟಿದ ಪ್ರದೇಶದ ಪೂರ್ವ ಮುಖ್ಯಮಂತ್ರಿ ಡಾ|| ಜೈಲಾಸನಾಥ ಖಟಜು ವಿಧಾನ ಸಭೆಗೆ ಆಯ್ಕೆ ಆದರು

ಗೋವಾದಿಂದ ಪೋರ್ಚುಗೀಸು ಡೆಟಿನ್ಯೂಗಳು ವಾಪಸಾದನಂತರ ಗೋವಾ ಆಡಳಿತವನ್ನು ಲೆಫ್ಟಿನೆಂಟು ಗವರ್ನರ್ ವಹಿಸಿಕೊಳ್ಳುವರೆಂದು ಭಾರತ ಸರ್ಕಾರದ ವಿದೇಶಾಂಗ ಉಪ ಮಂತ್ರಿಯವರಾದ ಶ್ರೀಮತಿ ಲಕ್ಷ್ಮೀ ಮೆನನ್ ಲೋಕಸಭೆಯಲ್ಲಿ ತಿಳಿಸಿದರು

ರಾಷ್ಟ್ರಪತಿಯವರ ಭಾಷಣದ ಮೇಲೆ ರಾಜ್ಯಸಭೆಯಲ್ಲಿ ನಿನ್ನೆ ಮೂರು ದಿನ ಚರ್ಚೆ ನಡೆಯಿತು ಸ್ವತಂತ್ರ ಸದಸ್ಯರಾದ ಶ್ರೀ ಎ ಡಿ ಮಣಿಯವರು, ಸ್ವತಂತ್ರ ಪಕ್ಷದ ಜಯಪುರ ಮಹಾರಾಜರು ಮತ್ತಿತರರು ಪ್ರತ್ಯೇಕ ದ್ರಾವಿಡನಾಡು ಬೇಡಿಕೆಯನ್ನು ಖಂಡಿಸಿದರು.

ಮೊನ್ನೆ ರಾತ್ರಿ ಲಿಸ್ಬನ್ ಮತ್ತು ಪೋರ್ಟ್ ಪ್ರಾವಿಡೋನ್ಸಿನಲ್ಲಿ ಪೋರ್ಚುಗೀಸು ಪ್ರಧಾನಿ ಡಾ|| ಸಾಲಜಾರರ ವಿರುದ್ಧ ಗಲಭೆಗಳು ಆಗಿ ಒರ್ವನ ಕೊಲೆ ಆಗಿ 52 ಮಂದಿ ಗಾಯಗೊಂಡರು.

ಮದ್ರಾಸು ರಾಜ್ಯದ 550 ನ್ಯಾಯಬೆಲೆ ಅಂಗಡಿಗಳನ್ನು ಅಕ್ಕೂಟಬಂದವರಿಗೆ ಪಡೆಯಲು ಮದ್ರಾಸು ಸರ್ಕಾರ ನಿರ್ಧರಿಸಿದೆ.

ಉತ್ತರ ಗಡಿಯಲ್ಲಿ ರಕ್ಷಣೆಯ ಬಗ್ಗೆ ಭಾರತ ಈಗ ಬಲವಾದ ಪರಿಸ್ಥಿತಿಯಲ್ಲಿದೆ ಎಂದು ಪಂ|| ನೆಹರು ನಿನ್ನೆ ಲೋಕಸಭೆಯಲ್ಲಿ ತಿಳಿಸಿದರು. ವಿಸ್ತೃತವಾಗಿ ಹೇಳುವದಾದರೆ, ಚೀನಾದೊಡನೆ ನಮಗೆ ಯುದ್ಧ ಬೇಡ. ಅದು ನಮಗೆ ಏಪರೀತ ಅನಪೇಕ್ಷನೀಯವಾದದ್ದು ಎಂದನಿಸಿದರು ಅದಕ್ಕೆ ಅದು ನಮ್ಮ ಹತೋಟಿಯಲ್ಲಿ ಇಲ್ಲ ಎಂದು ನುಡಿದ ಸೆಹರು ಸರ್ವ ವಿಧದ ಆಕಸ್ಮಿಕ ಪ್ರಸಂಗಗಳಿಗೂ ನಾವು ಸಿದ್ಧವಾಗಿರಬೇಕು ಎಂದರು.

× ನಾಗಾಲ್ಯಾಂಡಿನ ಆಡಳಿತಗಾರರ ಪ್ರಕಾರ 1960 ರಲ್ಲಿ ಬಂಧಿಸಲಾದ ನಾಲ್ವರು ವೈಮಾನಿಕರು ಇನ್ನೂ ಬಿಡುಗಡೆ ಆಗಿಲ್ಲವೆಂದು ಕೊಹಿಮಾದಿಂದ ಬಂದ ವಾರ್ತೆ ತಿಳಿಸುತ್ತದೆ.

ಪೀನಾ ಹಾವಿನಿಂದ ಮರಣ

ಜೋಧ್ಪುರದಲ್ಲಿ ಕಳೆದ ಶನಿವಾರ ಪೀನ ಹಾವಿನ ವಿಷದಿಂದ ಹನ್ನೆರಡು ವರ್ಷದ ಹುಡುಗನು ಮರಣಹೊಂದಿದನೆಂದು ವರದಿಯಾಗಿದೆ. ಮರಳು ಕಾಡುಗಳಲ್ಲಿ ಮಾತ್ರ ಪೀನಾ ಇರುವದೆಂದು ಹೇಳಲಾಗಿದೆ. ಅದು ಮನುಷ್ಯನನ್ನು ಕಡಿಯುವದಿಲ್ಲ. ಮನುಷ್ಯನು ಮಲಗಿದ್ದಾಗ ಅವನ ಎದೆಯ ಮೇಲೆ ಹರಿದುಕೊಂಡುಹೋಗಿ ಮೂಗಿನಹೊಳ್ಳೆ ಹತ್ತಿರ ಉಗುಳುವುದು ಅದನ್ನು ಉಸಿರಿನೊಡನೆ ಎಳೆದುಕೊಳ್ಳುವಾಗ ಮನುಷ್ಯನು ಸಾಯುವನು ಈ ಹಾವುಗಳು ಇಲ್ಲಿ ಸಾಮಾನ್ಯವಾಗಿ ಇಂದಿದ್ದರೂ ಜೈಸಲ್ಮಾರ್ ಮತ್ತು ಬಾರ್ಮರ್ ಜನರು ಈ ವಿಷಯದಲ್ಲಿ ಬೇಕಾದಷ್ಟು ಹೇಳುವರು.

× ಕಳೆದ ತಿಂಗಳು 25 ನೆಯ ತಾ||ನಿಂದ ರಾಯಡೂರಿನಲ್ಲಿ ನೀರು ಸರಬರಾಜು ಸಂಪೂರ್ಣವಾಗಿ ನಿಂತಿದೆ

ಒಂದು ಸಾವಿರ ರೂ. ದಂಡ

ಬೊಂಬಾಯಿನ ಬ್ಲಿಟ್ಜ್ ಸಂಪಾದಕರಾದ ಶ್ರೀ ಆರ್ ಕೆ ಕರಾಂಜಿಯಾ ರವರಿಗೆ, ಪ್ರಥಮ ದರ್ಜೆ ನ್ಯಾಯಾಧೀಶ ಶ್ರೀ ವಿಸ್ಕಾರವರ ನ್ಯಾಯಾಲಯಕ್ಕೆ ಅಗೌರವ ಮಾಡಿದ ಸಂದರ್ಭದಲ್ಲಿ ಜಬ್ಬಲ್ಪುರ ಶ್ರೇಷ್ಠನ್ಯಾಯಾಲಯದ ಡಿವಿಜಿಷನ್ ಬೆಂಚ್ ರೂ 1 ಸಾವಿರ ದಂಡ ವಿಧಿಸಿತು ಇದೇ ಅಪರೋಧದ ಮೇಲೆ ಡಿವಿಜಿಷನ್ ಬೆಂಚು ಪತ್ರಿಕೋದ್ಯಮಿಗಳಾದ ಶ್ರೀ ಸೀತಾರಾಂ ಜಿ. ಕೋಳ್ಕೆ ಮತ್ತು ಮತ್ತೊಬ್ಬ ಶ್ರೀ ಬಲವಂತಸಿಂಗ್ ಗಾರ್ಗ್ಯರಿಗೆ ತಲಾ ರೂ. 500 ದಂಡ ವಿಧಿಸಲಾಯಿತು

ವ್ಯಾಪಾರ ಬಂದ್

ಭಾರತದ 5 ವ್ಯಾಪಾರ ಸಂಸ್ಥೆಯವರು ಟಿಬೆಟ್ಟಿನಲ್ಲಿ ತಮ್ಮ ಕಂಪೆನಿಗಳನ್ನು ಒಂದು ಮಾಡಿ ಭಾರತಕ್ಕೆ ವಾಪಸಾದರೆಂದು ಪಂ|| ನೆಹರು ಲೋಕಸಭೆಯಲ್ಲಿ ತಿಳಿಸಿದರು

ಪೋಲೀಸನ ಬಂಧನ

ರೈಲ್ವೆ ಡೆಲಿವರಿಗಳನ್ನು ತೆತ್ತಿಗೆದ ಕೊಳ್ಳುತ್ತಿದ್ದ ಅಂತರ ಪ್ರಾಂತದ ತಂಡದ ಕೆಲಸಂ ಬಂಧನವಾಗಿದೆ ಎಂದು ನವದೆಹಲಿ ವಾರ್ತೆ ತಿಳಿಸುತ್ತದೆ. ಈ ಸಂಬಂಧದಲ್ಲಿ ಪೋಲೀಸು ಕಾರ್ಯಸೈಟಲು ಓರ್ವ ಬಂಧಿತನಾಗಿದ್ದಾನೆ.

★

ಇತ್ತೀಚಿಗೆ ಎಂದರೆ ಏಪ್ರಿಲ್ 30 ರಲ್ಲಿ ಭಾರತ ಚೀನಕ್ಕೆ ಬರೆದ ಪತ್ರದಲ್ಲಿ ಭಾರತ ಪ್ರದೇಶದಿಂದ ವಾಪಸಾಗಬೇಕೆಂದೂ, ಶಾಂತಿಯುತ ಸಂಧಾನಗಳಿಗೆ ಅಗತ್ಯ ಪರಿಸ್ಥಿತಿ ಉಂಟು ಮಾಡಬೇಕೆಂಬುದಾಗಿಯೂ ತಿಳಿಸಿದೆ. ಹಾಗಾಗುವದರಿಂದ ಗಡಿ ಸಮಸ್ಯೆ ಶೀಘ್ರವಾಗಿ ಪರಿಹಾರವಾಗುವದು ಮತ್ತೆ ಚೀನಾ ಭಾರತಗಳಲ್ಲಿ ಸಹಕಾರ ಬಾಂಧವ್ಯ ಉಂಟಾಗುವದು ಎಂದು ತಿಳಿಸಿದೆ.

ಪಂ|| ನೆಹರು ಗೋವಾಕ್ಕೆ ಶೀಘ್ರದಲ್ಲಿಯೇ ಭೇಟಿ ಕೊಡುವರು.

ವಿವಿಧ ವಿಷಯಗಳು

ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿದ ಈಲೂರು ಪೌರಭೆಯ ಉಪಾಧ್ಯಕ್ಷ ಶ್ರೀ ಆರ್. ವೆಂಕಪ್ಪಯ್ಯನವರು ಈಲೂರಿನಲ್ಲಿ ವಾಂಕ್ಕೆ ಒಂದು ದಿನ ಉಪವಾಸ ಮಾಡುವರು ನೀರು ಸಂಬಂಧಿಸಿದ ನಿರ್ಣಯ ಅಂಗೀಕೃತವಾಗದೇಕೆಂದು ಅವರು ಒತ್ತಾಯಿಸಿದ್ದಾರೆ.

ಹೊಸ ಮೈಸೂರು ಸರ್ಕಾರದ ಅರಣ್ಯ ಪ್ರಾಂತ ಅಧಿಕಾರಿಗಳ ಸಿನಿಯಾರಿಟಿ ಪಟ್ಟಿ ತಡವಾಗಿರುವದನ್ನು ಕರ್ನಾಟಕೇಂದ್ರ ವಿವಾದಿಸಿದೆ ಎಂದು ಬೆಂಗಳೂರಿನಿಂದ ಬಂದ ವಾರ್ತೆ ತಿಳಿಸುತ್ತದೆ

ಹಸೂಡಿ ಸಕ್ಕರೆ ಫಾರಂ ವ್ಯವಸ್ಥಾಪಕರಾದ ಆರ್ ಜಿ ಗೋರೆಯವರೆಂದು ಗುರುತಿಸಲಾದ ತಲೆಯಿಲ್ಲದ ದೇಹ ತಿವಮೊಗ್ಗಕ್ಕೆ 5 ಮೈಲಿಗಳ ದೂರದಲ್ಲಿ ಹೂಳಿದ್ದು ಪೋಲೀಸರಿಂದ ಪತ್ತೆಯಾಗಿದೆ ಇವರು ಪತ್ರ ಇಲ್ಲವೆಂದು ತುಂಗಭದ್ರ ಸಕ್ಕರೆ ಕಾರ್ಖಾನೆ ವ್ಯವಸ್ಥಾಪಕ ಶ್ರೀ ಶಿರೋಳ್ಕರ್‌ರು ಪೋಲೀಸರಿಗೆ ದೂರಿತ್ತಿದ್ದಾರೆ ಈ ಸಂಬಂಧದಲ್ಲಿ ಕೃಷ್ಣ ಹಾಗೂ ದರ್ಶಗೀರ್ ಎಂಬವರು ಬಂಧನವಾಗಿದೆ

ತಿರುಚಿಗೆ 35 ಮೈಲುಗಳ ದೂರವಿರುವ ಕಲವಾನಿಳಂ ಗ್ರಾಮದಲ್ಲಿ ಮೊನ್ನೆಯ ದಿನ ಆಗ್ನಿ ಅನಾಹುತವಾಗಿ 140 ಗುಡಿಸಲುಗಳು ಭಸ್ಮವಾಗಿ ರೂ 40 ಸಾವಿರ ನಷ್ಟ ಅಂದಾಜಾಗಿದೆ.

ಹೊಸ ಧೂಮಕೇತುವನ್ನು ಜಪಾನಿನ ಖಗೋಳ ಶಾಸ್ತ್ರಜ್ಞ 49 ವಯಸ್ಸಿನ ವಿ.ಸೋರು ಕೊಂಡ ಚಿತ್ರತೆಗೆದು ಕೂಪರ್ ಹೇರ್ಕನ್ಸಿನ ಅಂತರ್ರಾಷ್ಟ್ರೀಯ ಖಗೋಳ ಶಾಸ್ತ್ರ ಸಂಸ್ಥೆಗೆ ಪರಿಶೀಲನೆಗೆ ಕಳುಹಿಸಿರುವರು.

ನಾಳೆಯ ಹಂಚಾಂಗ

ಅನಿಷ್ಠನ ವಾಹನವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿರೋಮಣಿ
ಕರ್ಕಶ್ಯಾಂ ಜೋಯಿಸರಿಂದ
4 ಅಮಾವಾಸ್ಯೆ ಬಂಣಿ

ಮೈಸೂರು ರಾಜ್ಯದಲ್ಲಿ ವಿಜ್ಞಾನಮಂದಿರಗಳು

ನವದೆಹಲಿ 2— ಪಂಚವಾರ್ಷಿಕ ಯೋಜನಾವಧಿಯಲ್ಲಿ ಮೈಸೂರು ರಾಜ್ಯದಲ್ಲಿ ವಿಜ್ಞಾನ ಮಂದಿರಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಪಟ್ಟ ಎಷ್ಟು ಕಾರ್ಯಕ್ರಮವನ್ನು ರಾಜ್ಯಸರಕಾರವು ತನ್ನೂ ರೂಪಿಸಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

೦೦೦೦

ಪಶ್ಚಿಮವಸ್ತು ಪರಿಶೋಧನಾಕಾರ್ಯ

ನವದೆಹಲಿ 2— ಮೈಸೂರು ಬೆಲ್ಲೆಯ ತಿಂಮಕೂಡ್ಲು ನರಸೀಪುರ ತಾಲ್ಲೂಕಿನಲ್ಲಿ ಈಗ ಕೈಗೊಂಡಿರುವ ಪಾಶ್ಚಿಮವಸ್ತು ಪರಿಶೋಧನಾಕಾರ್ಯಗಳು ತೀಕ್ಷ್ಣದಲ್ಲಿಯೇ ಮುಗಿಯುವ ನೀರೀಕ್ಷೆಯಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

೦೦೦೦

ಬ್ರಿಟನ್ ಹೆಚ್ಚು ಸಾಲ ಪಡೆದಿದೆ

ಏಪ್ರಿಲ್ಲು 30 ಕ್ಕೆ ಮುಕ್ತಾಯವಾಗುವ ಆರ್ಥಿಕ ವರ್ಷದಲ್ಲಿ ಅಂತರ ರಾಷ್ಟ್ರೀಯ ನಿಧಿಯಿಂದ ಬ್ರಿಟನ್ನು ಎಲ್ಲ ದೇಶಗಳಿಗಿಂತಲೂ ಹೆಚ್ಚು ಸಾಲ ತೆಗೆದುಕೊಂಡಿದೆ

೦೦೦೦

ಈಜಲು ಮಂದಿಂದ ಸಕ್ಕರೆ

ಹೈದರಾಬಾದು —ಆಂಧ್ರ ರಾಜ್ಯದಲ್ಲಿರುವ 3 ಮಿಲಿಯ ಈಜಲುಮಡುಗಳಿಂದ ಸಕ್ಕರೆ ತಯಾರಿಸುವ ಯೋಜನೆಯನ್ನು ತಯಾರಿಸಲಾಗುತ್ತಿದೆಯೆಂದು ಪ್ರಾನಾನಿರೋಧ ಮಂತ್ರಿ ಹೇಳಿದರು.

೦೦೦೦

ಕಾಮನ್ವೆಲ್ತು ಪ್ರದರ್ಶನದಲ್ಲಿ ಭಾರತೀಯ ವಸ್ತುಗಳು

ಭಾರತೀಯ ಕಮಲದ ಹೂವು ಪುಷ್ಪ ತೆಂಗಿನಕಾಯಿಗಳನ್ನೂ, ಪ್ರಾಕೃತಿಕ ಸಿಲ್ಕಿನ ಸೀರೆ ಮತ್ತು ವಜ್ರಗಳನ್ನೂ, ಸಿಲೋನಿನ ಕಾಸ್ಮೆದಂತಗಳನ್ನೂ, ಡಾರ್ಲಿಂಗ್ಟನ್ನಿನ ಶತ್ರಿಂ ಎಡಿಲ್ಬ್ರಲಾಜ್ (ಕಾಟಿ ಡಹರ್ಯಾಂ) ಮೇ 12 ರಿಂದ ಪ್ರದರ್ಶನಕ್ಕಿಡಲಾಗುವುದು: ಕ್ಯಾನ್ಸರು ಸಂಶೋಧನೆಗೆ ಫಂಡು ಕೂಡಿಸಲು ದಕ್ಷಿಣ-ಡಹರ್ಯಾಂ ಮತ್ತು ಉತ್ತರ ಯಾರ್ಕ್‌ಷೈರಿನ ಹೂವಾತಿಗರ ಸಂಘದವರು ಕಾಮನ್ವೆಲ್ತು ರಾಷ್ಟ್ರಗಳ ವನಸ್ಪತಿಗಳು, ಕೂವುಗಳು, ವಸ್ತ್ರಗಳು, ಹಾಗೂ ವಜ್ರಗಳ ಪ್ರದರ್ಶನವನ್ನು ಏರ್ಪಡಿಸಿರುವರು.

SHAKTI SUDHA

A Superb Tonic

For Quality Printing — ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

L. N. Press — ಅಶೋಕಾ ಫಾರ್ಮಸಿ

Sivarampet, Mysore — ಅಶೋಕಾ ಬಜಾರ್, ಮೈಸೂರು

ವುಡ್‌ಲ್ಯಾಂಡ್ಸ್ ಆಕ್ಟೋಫೋಷ 12 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

Help The 'Gorakshana'

Advertise in Gorakshana and help the pious cause

ಆಪೆರಾ— ಜನಭರಿತ 2 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣಾಂಜಿತ ಚಿತ್ರ] [ದಿನವಹಿ 3 ಆಟಗಳು]



— — Orbital Launching — —

Edited, Printed & Published by the Proprietor, Dharma Prachara Nirata M. S. Kumara Rao at the Srivanivoi Press, Chamarajapuram, Mysore 4.